## ಭಗವದ್ಗೀತೆ ಅಭಿಯಾನಕ್ಕೆ ಚಾಲನೆ ನೀಡಿದ ಸ್ವಾಮೀಜಿ

# ‘ಭಗವದ್ಗೀತೆಯಿಂದ ಮಾತ್ರ ಚಿತ್ ಸ್ವಾಸ್ಥ್ಯ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಭಗವದ್ಗೀತೆಯಿಂದ ಸಿಗುವ ಚಿತ್ ಸ್ವಾಸ್ಥ್ಯದ ಮೂಲಕ ಜಗತ್ತಿನ ಜಟಿಲ ಸಮಸ್ಯೆ ನಿವಾರಣೆ ಸಾಧ್ಯ’ ಎಂದು ಶಿರಸಿ ಸೋಂದಾ ಸ್ವರ್ಣವಲ್ಲೀ ಮಠಾಧೀಶ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ತಿಳಿಸಿದರು.

ಇಲ್ಲಿನ ಸಂತ ಮೀರಾ ಶಾಲೆಯಲ್ಲಿ ಮಂಗಳವಾರ ರಾಜ್ಯಮಟ್ಟದ ಭಗವದ್ಗೀತಾ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು,‘ಸ್ವಚ್ಛ ಮನಸ್ಸಿನ ತಳಹದಿ ಮೇಲೆ ವ್ಯಕ್ತಿತ್ವ ವಿಕಸನ, ನೈತಿಕ ಪುನರುತ್ಥಾನ, ಸಾಮಾಜಿಕ ಸಾಮರಸ್ಯ ಹಾಗೂ ರಾಷ್ಟ್ರೀಯ ಭಾವೈಕ್ಯ ಎಂಬ ನಾಲ್ಕು ಕಂಬಗಳನ್ನು ನೆಟ್ಟು ಭಾರತ ಎಂಬ ಮಹಲ್ ನಿರ್ಮಿಸಬೇಕಿದೆ. ಅದಕ್ಕೆ ಭಗವದ್ಗೀತೆ ಅಭಿಯಾನ ಕೈಗೊಳ್ಳಲಾಗಿದೆ’ ಎಂದರು.

‘ಗೀತೆಯಲ್ಲಿ ನಾಲ್ಕು ಪ್ರಕಾರದ ಯೋಗಗಳನ್ನು ಹೇಳಲಾಗಿದೆ. ಕರ್ಮ, ಜ್ಞಾನ, ಧ್ಯಾನ ಹಾಗೂ ಭಕ್ತಿ. ಇವು ಯೋಗಾಸನಗಳಲ್ಲ; ಮನುಷ್ಯನ ಬದುಕನ್ನು ಹಸನು ಮಾಡುವ ಯೋಗಗಳು. ಇವುಗಳನ್ನು ಪಾಲಿಸುವವರ ಮನಸ್ಸು, ದೇಹ, ಆಲೋಚನೆ ಎಲ್ಲವೂ ಶುದ್ಧವಾಗುತ್ತದೆ’ ಎಂದರು.




ಬೆಳಗಾವಿಯಲ್ಲಿ ಮಂಗಳವಾರ ನಡೆದ ರಾಜ್ಯಮಟ್ಟದ ಭಗವದ್ಗೀತಾ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರು ಗೀತಾ ಪಾಠ ಬೋಧಿಸಿದರು. ಅರವಿಂದರಾವ್ ಜಿ. ದೇಶಪಾಂಡೆ, ಸಚಿವೆ ಲಕ್ಷ್ಮಿ ಹೆಬ್ಬಾಳಕರ, ನಿಜಲಿಂಗೇಶ್ವರ ಸ್ವಾಮೀಜಿ, ಚಿತ್ತಕಾಶಾನಂದ ಸ್ವಾಮೀಜಿ, ಗೋಪಾಲ ಜಿನಗೌಡ, ವಿಘ್ನೇಶ್ವರ ಹೆಗಡೆ ಇದ್ದಾರೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮಾತನಾಡಿ, ‘ಭಾರತದ ಆಚೆಗೆ ಕ್ರೈಸ್ತ ಮತ್ತು ಇಸ್ಲಾಂ ಮಾತ್ರ ಎರಡೇ ಪ್ರಧಾನ ಧರ್ಮಗಳು ಆಗಿವೆ. ಆದರೂ ಹೋರಾಟ ನಡೆದಿದೆ. ನಮ್ಮ ದೇಶದಲ್ಲಿ ಹಲವು ಧರ್ಮಗಳು, ಅಸಂಖ್ಯಾತ ಜಾತಿ-ಭಾಷೆಗಳಿವೆ. ಏಕತೆ ಸಾಧಿಸಿದ ಹಿರಿಮೆ ನಮ್ಮದು’ ಎಂದರು.

ಜನ ಕಲ್ಯಾಣ ಟ್ರಸ್ಟ್‌ನ ಅಧ್ಯಕ್ಷ ಅರವಿಂದರಾವ್ ಜಿ. ದೇಶಪಾಂಡೆ, ಆರ್ಷ ವಿದ್ಯಾ ಕೇಂದ್ರದ ಚಿತ್ಪ್ರಕಾಶಾನಂದ ಸ್ವಾಮೀಜಿ, ನಿಡಸೋಸಿ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠದ ನಿಜಲಿಂಗೇಶ್ವರ ಸ್ವಾಮೀಜಿ ಇದ್ದರು.